# ಮಕ್ಕಳ ಮೇಲಿನ ಮೋಹ

**ಮಕ್ಕಳು ಬೆಳೆಯುತ್ತಿರುವಂತೆಯೇ ತಮ್ಮದೇ ಆದ ಲೋಕದಲ್ಲಿರಲು ಬಯಸುತ್ತಾರೆ. ಅದು ಸಹಜ. ಎಷ್ಟೋ ಜನ ಪೋಷಕರು ತಮ್ಮ ಮಕ್ಕಳು ತಮ್ಮೊಂದಿಗೆ ಯಾವ ವಿಷಯವನ್ನೂ ಹಂಚಿಕೊಳ್ಳುವುದಿಲ್ಲ ಎಂದು ಕೊರಗುತ್ತಾರೆ.**

■ **ಲಾವಣ್ಯಗೌರಿ ವೆಂಕಟೇಶ್**



ಪ್ರತಿಯೊಬ್ಬ ತಂದೆ–ತಾಯಿಯೂ ತಮ್ಮ ಮಕ್ಕಳನ್ನು ಅಕ್ಕರೆಯಿಂದಲೇ ಬೆಳೆಸುತ್ತಾರೆ. ಮಕ್ಕಳನ್ನು ತಮ್ಮ ಯೋಗ್ಯತಾನುಸಾರ ಸಾಧ್ಯವಾದಷ್ಟೂ ಬದುಕಿನಲ್ಲಿ ಎಲ್ಲಾ ಸೌಕರ್ಯಗಳೂ ಸಿಗುವಂತೆ ನೋಡಿಕೊಂಡು ಬೆಳೆಸುತ್ತಾರೆ. ಶ್ರೀಮಂತ ಪೋಷಕರು ತಮ್ಮ ಮಕ್ಕಳನ್ನು ಕಾರಿನಲ್ಲೇ ಓಡಾಡಿಸಿದರೆ, ಹಣವಂತರಲ್ಲದವರು ದ್ವಿಚಕ್ರ ವಾಹನದಲ್ಲಾದರೂ ಸವಾರಿ ಮಾಡಿಸುತ್ತಾರೆ. ಮಗು ಹುಟ್ಟಿದಾಗಿನಿಂದ ಅದರ ಜೊತೆ ಪೋಷಕರ ಅವಿನಾಭಾವ ಸಂಬಂಧ ಬೆಳೆದುಬಿಡುತ್ತದೆ. ಈ ಸಂಬಂಧ ಕೆಲವು ಪೋಷಕರಲ್ಲಿ ಅತೀ ಹೆಚ್ಚು ಎನಿಸುವಷ್ಟೇ ಇರುತ್ತದೆ.

ಮಕ್ಕಳು ಹದಿಹರೆಯಕ್ಕೆ ಬರುವವರೆಗೆ ಏನೂ ತೊಂದರೆ ಇರುವುದಿಲ್ಲ. ಮಕ್ಕಳಿಗೂ ಪೋಷಕರ ಅವಲಂಬನೆ ಬೇಕಾಗಿರುತ್ತದೆ. ಆದರೆ ಕೆಲವು ಪೋಷಕರು, ಮಕ್ಕಳು ಟೀನೇಜಿಗೆ ಬಂದರೂ, ಅವರ ಕೆಲಸಗಳನ್ನು ಅವರೇ ಸಮರ್ಥವಾಗಿ ನಿಭಾಯಿಸಲು ಸಾಧ್ಯವಿದ್ದರೂ, ಮಕ್ಕಳ ಅಗತ್ಯಗಳನ್ನು ತಾವೇ ಪೂರೈಸಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ಮಕ್ಕಳು ದೊಡ್ಡವರಾಗುತ್ತಿದ್ದಾರೆ, ಅವರಿಗೆ ಅವರದೇ ಆದ ಸಮಯ ಹಾಗೂ ಸ್ಥಳಾವಕಾಶವನ್ನು ನೀಡಬೇಕು ಎಂದು ಯೋಚಿಸುವುದೇ ಇಲ್ಲ.

ಈ ಅತಿಯಾದ ಕಾಳಜಿ ಕೆಲವು ಮಕ್ಕಳಿಗೆ ಕಿರಿಕಿರಿಯನ್ನುಂಟು ಮಾಡುತ್ತದೆ ಹಾಗೂ ಕೆಲವು ಮಕ್ಕಳನ್ನು ಸೋಮಾರಿಗಳನ್ನಾಗಿ ಪರಿವರ್ತಿಸುತ್ತದೆ. ಸ್ವತಂತ್ರ ಮನೋಭಾವವನ್ನು ಹೊಂದಿರುವ ಮಕ್ಕಳಿಗೆ ಅವರದೇ ಆದ ವೇಳೆ, ಸಮಯ, ಜಾಗ (ಸ್ಪೇಸ್) ಬೇಕಾಗಿರುತ್ತದೆ. ಇದು ಸಿಗದಿದ್ದಾಗ ಬೇಸರವಾಗುವುದು ಸಹಜ. ಇದನ್ನೇ ಈಗಿನ ಪೋಷಕರು, ತಾವು ಹದಿಹರೆಯಕ್ಕೆ ಕಾಲಿಟ್ಟಾಗ ಅನುಭವಿಸಿರುವುದು ಮರೆತೇ ಹೋಗಿರುತ್ತದೆ. ಅವರ ಕಣ್ಣಿಗೆ ಕಾಣಿಸುವುದು ಇಷ್ಟೇ, ಮಕ್ಕಳ ಸುರಕ್ಷತೆ ಹಾಗೂ ಸೌಕರ್ಯ. ಇನ್ನೂ ಕೆಲವು ಮಕ್ಕಳು ಪೋಷಕರ ಅತಿಯಾದ ಆರೈಕೆಯಿಂದ ಸೋಮಾರಿಗಳಾಗಿ, ಸಣ್ಣ ಸಣ್ಣ ಕೆಲಸಗಳನ್ನೂ ಸಹಾ ಮಾಡಲು ಅಸಮರ್ಥರಾಗಿರುತ್ತಾರೆ. ಪೋಷಕರ ಮಕ್ಕಳ ಮೇಲಿನ ಈ ತನ್ನದೆಂಬ ಹಿಡಿತ ಅಥವಾ ಸ್ವಾಮ್ಯ ಪ್ರವೃತ್ತಿ(ಪೊಸೆಸಿವ್‌ನೆಸ್) ಬಹಳ ತಾಪತ್ರಯಗಳಿಗೆ ಎಡೆ ಮಾಡಿಕೊಡುತ್ತದೆ. ಮಕ್ಕಳ ಮೇಲೆ ಅತಿಯಾದ ಅಕ್ಕರೆಯ ಬಿಗಿಪಟ್ಟು ಎಲ್ಲಾ ಪೋಷಕರಲ್ಲೂ ಇದ್ದೇ ಇರುತ್ತದೆ. ಆದರೆ ಮಕ್ಕಳು ಬೆಳೆಯುತ್ತಿದ್ದ ಹಾಗೆಯೇ ಈ ಅಕ್ಕರೆಯ ಪಟ್ಟಿನ ಬಿಗಿ ಸಡಿಲವಾಗುತ್ತಾ